ಸಮುದ್ರತೀರದಲ್ಲಿ ಬಲೆಯ ಮೀನನ್ನು ಕದ್ದು ಹೆಕ್ಕಿ, ಬಲೆಯವರಿಂದ ಬಯ್ಗಳು ತಿಂದು ಬದುಕುತ್ತಿದ್ದ ಬಾಳಿನ ಚಿತ್ರ ಕಣ್ಣ ಮುಂದೆ ಸುಳಿದು ಬಂತು. ಸಾಹುಕಾರ್ರು ಸಹಾಯ ಮಾಡದೆ ಇದ್ದರೆ ಅರಬೀ ಶಾಲೆಗೆ ಹೋಗಲಿಕ್ಕಿತ್ತಾ? ಕುರಾನ್ ಕಲಿಯಲಿಕ್ಕಿತ್ತಾ? ಜತೆಗೆ ಎಸ್ಸೆಸ್ಸೆಲ್ಸಿ ಓದಲಿಕ್ಕಿತ್ತಾ? ವಿಧವೆ ಅಮ್ಮ, ವಿಧವೆ ಅಕ್ಕ ಮೀನು ಸಿಗಿದು, ಗದ್ದೆಯಲ್ಲಿ ಕೂಲಿ ಮಾಡಿ ದುಡಿದು ಇಷ್ಟೆಲ್ಲಾ ಮಾಡುವುದು ಸಾಧ್ಯವಿತ್ತಾ? 'ಎಲ್ಲಾ ಸಾಹುಕಾರ್ರ ದಯೆ. ಅವರಿಂದ ನೀನೊಂದು ಮನುಷ್ಯನಂತಾದಿ...' ಎಂದು ಅಮ್ಮ ದಿನಾಲೂ ಹೇಳುತ್ತಿರುತ್ತಾಳೆ. ಹೈಸ್ಕೂಲಿನಿಂದ ಹೊರಬಂದ ಕೂಡಲೇ ತನ್ನ ಮೀನು ವ್ಯಾಪಾರದ ಲೆಕ್ಕಪತ್ರ, ಕೆಲಸದ ಮೇಲ್ವಿಚಾರಣೆಯ ಹೊಣೆಯನ್ನು ನನಗೆ ವಹಿಸಿ ಕೊಟ್ಟು ಮಾಡಿದ ಉಪಕಾರ ಒಂದೇ ಎರಡೇ?

ಖಾನ್ ಸಾಹೇಬರು ಅಬ್ದುಲ್ಲಾನ ಅತಿ ಸನಿಹಕ್ಕೆ ಬಂದು ಅವನ ಎರಡೂ ಕೈಗಳನ್ನೂ ಹಿಡಿದುಕೊಂಡು ಅಂದರು,

'ಅಬ್ದುಲ್ಲಾ... ನನ್ನ ಮರ್ಯಾದೆ, ನಮ್ಮ ಮನೆಯ ಮರ್ಯಾದೆ. ನನ್ನ ಮಗಳ ಭವಿಷ್ಯ ಎಲ್ಲಾ ನಿನ್ನ ಕೈಯಲ್ಲಿದೆಯಪ್ಪಾ... ನೀನು ನನಗೆ ಒಂದು ಉಪಕಾರ ಮಾಡುತ್ತೀಯಾ...?'

ಸಾಹುಕಾರರ ಕಣ್ಣಲ್ಲಿ ನೀರು!

ಅಬ್ದುಲ್ಲಾ ಮೂಕನಾಗಿ ಅವರ ಮುಖವನ್ನೇ ನೋಡುತ್ತಿದ್ದ.

'ಸಲ್ಮಾನನ್ನು ಅವಳ ಗಂಡ ಮರು ಮದುವೆ ಆಗಲು ಒಪ್ಪಿದ್ದಾನೆ. ಖಾಜಿ ಸಾಹೇಬರು ಹೇಳುತ್ತಾರೆ, ಇನ್ನೊಮ್ಮೆ ನಿಕಾಹ್ ಮಾಡಿಕೊಡಬೇಕಿದ್ದರೆ ಧರ್ಮಶಾಸ್ತ್ರದ ಪ್ರಕಾರ ಅವಳು ಇನ್ನೊಬ್ಬನನ್ನು ಮದುವೆಯಾಗಿ ಕನಿಷ್ಠ ಪಕ್ಷ ಒಂದು ಹಗಲು ಒಂದು ರಾತ್ರಿಯಾದರೂ ಕಳೆದಿರಬೇಕಂತ. ನಂತರ ತಲಾಕ್ ಕೊಡಿಸಿ ಮರು ಮದುವೆಯಾಗಬೇಕಂತೆ. ಇದಕ್ಕೆ ನೀನು ಸಹಾಯ ಮಾಡಬೇಕು.'

'ನಾ... ನೇನು ಮಾಡಬೇಕು... ಹೇಳಿ...' ಎಂದ ಅಬ್ದುಲ್ಲಾ ಕಷ್ಟಪಟ್ಟು.

'ಖಾಜಿ ಸಾಹೇಬರು ಈಗ 10 ಗಂಟೆಗೆ ಬರುತ್ತಾರೆ. ನೀನು ದೊಡ್ಡ ಮನಸ್ಸು ಮಾಡಿ ಒಂದು ದಿನದ ಮಟ್ಟಿಗೆ ನನ್ನ ಮಗಳನ್ನು ಮದುವೆಯಾದರೆ ನಿನ್ನದು ದೊಡ್ಡ ಉಪಕಾರ. ಒಂದು ದಿನದ ಮಟ್ಟಿಗೆ ಮಾತ್ರ. ನಾಳೆ ಹತ್ತು ಗಂಟೆಯ ನಂತರ ತಲಾಕ್ ಕೊಡುವೆಯಂತೆ. ಮತ್ತೆ ನಿನಗೇನೂ ತೊಂದರೆ ಬಾರದು. ಎಲ್ಲಾ ಗುಟ್ಟಾಗಿರುತ್ತದೆ. ಇದಕ್ಕೆ ನೀನು ಒಪ್ಪಿದರೆ ನನ್ನ ಮಗಳ ಒಡೆದ ಬಾಳನ್ನು ಒಂದುಗೂಡಿಸಿದ ಪುಣ್ಯ ಬರುತ್ತದೆ ನಿನಗೆ...'

ಸ್ವಲ್ಪ ಹೊತ್ತಿನ ತನಕ ಕೋಣೆಯಲ್ಲಿ ನಿಶ್ಶಬ್ದ.

ಖಾನ್ ಸಾಹೇಬರು ಸಿಗರೇಟು ತೆಗೆದು ತುಟಿಗಿಟ್ಟು ಲೈಟರ್ ತಾಗಿಸಿದರು. ಒಂದು ದಮ್ಮು ಎಳೆದು ಹೊಗೆ ಉಗುಳಿ,

'ಏನು ಅಬ್ದುಲ್ಲಾ... ನಿನ್ನದು ಒಪ್ಪಿಗೆ ಇದೆ ತಾನೇ?' ಎಂದು ಕೇಳಿದಾಗ ಅಬ್ದುಲ್ಲಾ ವಾಸ್ತವಕ್ಕೆ ಬಂದ.

ಕ್ಷಣಕಾಲ ಮೌನವಾಗಿದ್ದು ಮತ್ತೆ ನಿರ್ಧಾರದ ದನಿಯಲ್ಲಿ ಅಂದ.

'ಸಾಹುಕಾರ್ರು ಹೇಳಿದಂತೆ... ನಾನು ತಯಾರಾಗಿದ್ದೇನೆ.'

ಖಾನ್ ಸಾಹೇಬರ ಮುಖದಲ್ಲಿ ಗೆಲುವು ಮಿಂಚಿತು. ಕೈಯಲ್ಲಿದ್ದ ಸಿಗರೇಟನ್ನು ಹಾಗೆಯೇ ಏಶ್‌ಟ್ರೇಯಲ್ಲಿ ಹಿಚುಕಿ ಒಳಗೆ ನಡೆದರು.

ಅಬ್ದುಲ್ಲಾ ಬೆವತು ಹೋಗಿದ್ದ. ಲುಂಗಿಯ ತುದಿಯಿಂದ ಮುಖವೊರೆಸಿಕೊಂಡ. ಛೇ!...